ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಡಾಃ ಯರಳಕಟ್ಟೆ ಮಂಜುನಾಥ | ಪಿ.ಡಬ್ಲ್ಯೂ. | 4 |
| ತಂದೆಯ ಹೆಸರು | ಃ | ತಿಪ್ಪಣ್ಣ | ಸಿ.ಡಬ್ಲ್ಯೂ. | 7 |
| ವಯಸ್ಸು | ಃ | 43 ವರ್ಷ | | |
| ಉದ್ಯೋಗ | ಃ | ಅಸಿಸ್ಟೆಂಟ್ ಡೈರೆಕ್ಟರ್, ಆರ್.ಎಫ್.ಎಸ್.ಎಲ್. ದಾವಣಗೆರೆ | | |
| ವಾಸ ಸ್ಥಳ | ಃ | ದಾವಣಗೆರೆ. | | |

ದಿ.03.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)</u> ಃ

1. 2019 ರಿಂದ 2022 ರವರೆಗೆ ಹಿರಿಯ ವೈಜ್ಞಾನಿಕಾ ಅಧಿಕಾರಿಯಾಗಿ ಎಫ್.ಎಸ್.ಎಲ್ ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 30.12.2019 ರಂದು ಚಾಸಾ.8 ವಿರೇಶ್ ಕುಮಾರ್ ರವರ ಮುಖಾಂತರ ಕೆ.ಟಿ.ಜೆ ನಗರ ಪೋಲೀಸ್ ಠಾಣೆಗೆ ಕ್ರೈಂ ನಂ.216/2019 ರಲ್ಲಿ ಸೀಲ್ ಮಾಡಿದ ಮೂರು ವಸ್ತುಗಳನ್ನು ನಮ್ಮ ಕಛೇರಿಯ ಸ್ವೀಕೃತಿ ವಿಭಾಗದವರು ವಿಶ್ಲೇಷಣೆಗಾಗಿ ಸಂಬಂಧಿಸಿದ ದಾಖಲೆಯ ಸಮೇತ ನೊಂದಾಯಿಸಿಕೊಂಡಿರುತ್ತಾರೆ.

3. ಸದರಿ ವಸ್ತುಗಳ ಮೇಲೆ ಕೆ.ಟಿ.ಜೆ ನಗರ ಪಿ.ಎಸ್ ಎಂಬ ಅರಗಿನ ಮುದ್ರೆ ಇರುತ್ತದೆ. ಆ ಸೀಲುಗಳು ಸುಸ್ಥಿತಿಯಲ್ಲಿದ್ದು, ತನಿಖಾಧಿಕಾರಿಗಳು ಕಳುಹಿಸಿದ ಮಾದರಿ ಸೀಲುಗಳಿಗೆ ಹೊಂದಾಣಿಕೆಯಾಗುತ್ತಿತ್ತು. ಸದರಿ ವಸ್ತುಗಳಲ್ಲಿ ವಸ್ತು ಸಂಖ್ಯೆ.1 ರಲ್ಲಿ 51.15 ತೂಕವಿತ್ತು. ವಸ್ತು ಸಂಖ್ಯೆ.2 ರಲ್ಲಿ 49.36 ತೂಕವಿತ್ತು. ವಸ್ತು ಸಂಖ್ಯೆ.3 ರಲ್ಲಿ 11.95 ತೂಕವಿತ್ತು.

4. ವಸ್ತು ಸಂಖ್ಯೆ.1 ರಲ್ಲಿ ಎಂಟು ಸಣ್ಣ ಪ್ಲಾಸ್ಟಿಕ್ ಕವರ್ ಗಳು ಇದ್ದು, ಸದರಿ ಪ್ಲಾಸ್ಟಿಕ್ ಕವರ್ ಗಳಲ್ಲಿ ಕಡು ಕಂದು ಬಣ್ಣದ (ಡಾರ್ಕ್ ಬ್ರೌನ್ ಕಲರ್) ಮುರಿದ ಸಣ್ಣ ಕಡ್ಡಿಗಳು, ಒಣಗಿದ ಎಲೆಗಳು, ಹೂವು ಮತ್ತು ಬೀಜಗಳು ಇದ್ದವು. ವಸ್ತು ಸಂಖ್ಯೆ.2 ರಲ್ಲಿ ಬಟ್ಟೆ ಚೀಲದಲ್ಲಿ ಮುರಿದ ಸಣ್ಣ ಕಡ್ಡಿಗಳು, ಒಣಗಿದ ಎಲೆಗಳು, ಹೂವು ಮತ್ತು ಬೀಜಗಳು ಇದ್ದವು. ವಸ್ತು ಸಂಖ್ಯೆ.3 ರಲ್ಲಿ ಬಟ್ಟೆ ಚೀಲದಲ್ಲಿ ಎರಡು ಪೇಪರ್ ಪ್ಯಾಕೇಟ್ ಗಳಲ್ಲಿ ಮುರಿದ ಸಣ್ಣ ಕಡ್ಡಿಗಳು, ಒಣಗಿದ ಎಲೆಗಳು, ಹೂವು ಮತ್ತು ಬೀಜಗಳು ಇದ್ದವು. ಸದರಿ ಮೂರು ವಸ್ತುಗಳನ್ನು ರಾಸಾಯನಿಕ ಮತ್ತು ಉಪಕರಣಗಳ ಸಹಾಯದಿಂದ ವಿಶ್ಲೇಷಣೆ ನಡೆಸಿದ್ದು, ಸದರಿ ವಸ್ತುಗಳು ಗಾಂಜಾ ಎಂಬ ಮಾದಕ ವಸ್ತು ಎಂದು ಕಂಡು ಬಂದಿರುತ್ತದೆ.

5. ಪರೀಕ್ಷೆ ನಂತರ ವಸ್ತು ಸಂಖ್ಯೆ.1 ರಲ್ಲಿ 36.72 ಗ್ರಾಂ, ವಸ್ತು ಸಂಖ್ಯೆ.2 ರಲ್ಲಿ 41.73 ಗ್ರಾಂ ವಸ್ತು ಸಂಖ್ಯೆ.3 ರಲ್ಲಿ 5.74 ಗ್ರಾಂ ವಸ್ತುವನ್ನು ಹಿಂದಿರುಗಿಸಿರುತ್ತೇನೆ. ಸೀಲ್ ಮಾಡಿದ ಸದರಿ ವಸ್ತುಗಳನ್ನು ಹಾಗೂ ನನ್ನ ಸಹಿ ಮಾಡಿದ ಮತ್ತು ಹಿರಿಯ ಅಧಿಕಾರಿಗಳ ಮುಖಾಂತರ ವರದಿಯೊಂದಿಗೆ ಸಂಬಂಧಪಟ್ಟ ಪೋಲೀಸ್ ಠಾಣೆಗೆ ಕಳುಹಿಸಿ ಕೊಟ್ಟಿರುತ್ತೇನೆ.

6. ಸದರಿ ವರದಿಯೊಂದಿಗೆ ನನ್ನ ಮಾದರಿ ಸಹಿ ಮತ್ತು ಅರಗಿನ ಸೀಲಿನ ಮಾದರಿ ಸಹ ಕಳುಹಿಸಿ ಕೊಟ್ಟಿರುತ್ತೇನೆ. ಸದರಿ ವರದಿಯನ್ನು **ನಿಪಿ.23** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.23(ಎ)** ಎಂದು ಗುರುತಿಸಲಾಯಿತು. ಮಾದರಿ ಸೀಲನ್ನು **ನಿಪಿ.24** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.24(ಎ)** ಎಂದು ಗುರುತಿಸಲಾಯಿತು.

7. ಎಂ.ಓ.1 ರ ವಸ್ತುವಿನ ಮೇಲೆ ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಎಂ.ಓ.1 ರ ಪ್ಯಾಕನ್ನು ನ್ಯಾಯಾಲಯ ಪರಿಶೀಲಿಸಲಾಗಿ ಅದರ ಮೇಲೆ 12 ಗ್ರಾಂ ಗಾಂಜಾ ಎಂದು ನಮೂದಿದ್ದು, ಆದರೆ ಈ ಸಾಕ್ಷಿಯು ಮೇಲ್ಕಂಡಂತೆ ವಸ್ತು ಸಂಖ್ಯೆ.3 ರಲ್ಲಿ 11.95 ಗ್ರಾಂ ಎಂದು ನಮೂದಿಸಿದ್ದು, ಸಾಕ್ಷಿಯು ಮುಂದುವರೆದು ವಸ್ತುವನ್ನು ಪರೀಕ್ಷೆಗೆ ಕಳುಹಿಸುವ ಸಂದರ್ಭದಲ್ಲಿ ಅದರ ತೂಕ ಕಡಿಮೆಯಾಗಿದೆ ಎಂದು

ಹೇಳುತ್ತಾರೆ. (ಗಾಂಜಾ ಒಣಗಿ ತೂಕ 5 ಎಂ.ಜಿ ಗ್ರಾಂ ಕಡಿಮೆಯಾಗಿದೆ ಎಂದು ಹೇಳುತ್ತಾರೆ). ಅದೇ ರೀತಿ ಇನ್ನು ಎರಡು ಪ್ಯಾಕ್ ಗಳ ಮೇಲೆ ನನ್ನ ಸಹಿ ಇದೆ ಎಂದು ಹೇಳುತ್ತಾರೆ. ಸದರಿ ಎರಡು ಪ್ಯಾಕೇಟ್ ಗಳು ಪಿ.ಎಫ್ ಸಂಖ್ಯೆ.113/2019 ರಲ್ಲಿ ನಮೂದಿಸಿದ ಕ್ರಮ ಸಂಖ್ಯೆ.1 ಮತ್ತು 2 ಆಗಿರುತ್ತದೆ. ಸದರಿ ಎರಡು ಪ್ಯಾಕೇಟ್ ಗಳನ್ನು ಕ್ರಮವಾಗಿ **ಎಂ.ಓ.5** ಮತ್ತು **ಎಂ.ಓ.6** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಶ್ರೀ ಕೆ.ಎಚ್.ವಿ, ವಕೀಲರಿಂದ ಆರೋಪಿತರ ಪರವಾಗಿ** ಃ

8. ಪೋಲೀಸರು ಪ್ಯಾಕ್ ಮಾಡಿ ಕಳುಹಿಸಿದ ವಸ್ತುಗಳನ್ನು ನಾನು ವಿಶ್ಲೇಷಣೆ ಮಾಡಿ ಕಳುಹಿಸಿರುತ್ತೇನೆ ಎಂದರೆ ಸರಿ. ನನಗೆ ವಿಶ್ಲೇಷಣೆಗೆ ಕಳುಹಿಸಿದಂತಹ ಗಾಂಜಾ ಸೊಪ್ಪುಗಳು ಎಷ್ಟು ದಿನದ ಹಿಂದೆ ಸಂಗ್ರಹಿಸಿದ ಸೊಪ್ಪುಗಳು ಎಂದು ನನಗೆ ಹೇಳಲಿಕ್ಕಾಗುವುದಿಲ್ಲ. ಸಾಕ್ಷಿಯು ಮುಂದುವರೆದು ಅದು ರಾಸಾಯನಿಕ ಪರಿಕ್ಷೆ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ.

9. ಗಾಂಜಾ ಸೊಪ್ಪುಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ವರದಿ ಕೊಡುವಷ್ಟು ನಾನು ಪರಿಣಿತಿ ಹೊಂದಿಲ್ಲ ಎನ್ನುವುದು ಸರಿಯಲ್ಲ. ಗಾಂಜಾ ಸೊಪ್ಪಿನ ಬೆಳವಣಿಗೆ ಮತ್ತು ಅವರ ಸ್ಥಿತಿ ಗತಿಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಗಾಂಜಾ ಸೊಪ್ಪಿನ ಮತ್ತು ತಂಬಾಕಿನ ವ್ಯತ್ಯಾಸ ನನಗೆ ಗೊತ್ತು. ಪೋಲೀಸರು ವಿಶ್ಲೇಷಣೆಗೆ ಕಳುಹಿಸಿದ ವಸ್ತುಗಳು ಗಾಂಜಾ ಸೊಪ್ಪುಗಳು ಅಲ್ಲ ಎಂದರೆ ಸರಿಯಲ್ಲ. ಗಾಂಜಾ ಸೊಪ್ಪುಗಳ ಬಗ್ಗೆ ನಾನು ತಿಳಿದುಕೊಳ್ಳದೇ ಇದುದ್ದರಿಂದ ನಾನು ಸಾಕ್ಷಿ ಹೇಳಲು ಸಮರ್ಥನಲ್ಲ ಎನ್ನುವುದು ಸರಿಯಲ್ಲ.

10. ಪೋಲೀಸರ ಕೋರಿಕೆಯ ಮೇರೆಗೆ ಸುಳ್ಳು ವರದಿಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಗಾಂಜಾ ಗಿಡಗಳ ಬಗ್ಗೆ ನಾನು ಅಧ್ಯಾಯನ ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರಶ್ನೆ ಃ ಗಾಂಜಾ ಗಿಡಗಳ ಅಧ್ಯಾಯನದ ಬಗ್ಗೆ ಯಾವ ಕೋರ್ಸ್ ಮಾಡಿದ್ದೀರಾ?

ಉತ್ತರ ಃ ಗಾಂಜಾ ವಿಶ್ಲೇಷಣೆ ಮಾಡುವ ಬಗ್ಗೆ ನನಗೆ ತರಬೇತಿ ಆಗಿರುತ್ತದೆಂದು ಹೇಳುತ್ತಾರೆ.

ಪ್ರಶ್ನೆ ಃ ಗಾಂಜಾ ಗಿಡಗಳ ಬಗ್ಗೆ ಎಲ್ಲಿ ತರಬೇತಿಯಾಗಿದೆ?

ಉತ್ತರ ಃ ನನಗೆ ಬೆಂಗಳೂರಿನ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ತರಬೇತಿಯಾಗಿದೆ ಎಂದು ಹೇಳುತ್ತಾರೆ.

11. ಗಾಂಜಾ ಇದೆ ಎಂದು ಹೇಳುವ ಪ್ಯಾಕೇಟನ್ನು ಹೊಡೆದಾಗ ಅದು ಎಷ್ಟು ದೂರದವರೆಗೆ ವಾಸನೆ ಬರುತ್ತದೆ ಎಂದರೆ ಸಾಕ್ಷಿಯು ತನಗೆ ಹೇಳಲಿಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅದು ರಾಸಾಯನಿಕ ವಿಭಾಗಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ.

12. ನಾನು ವಿಶ್ಲೇಷಣೆಗೆ ಒಳಪಡಿಸಿದ ಗಾಂಜಾದಲ್ಲಿ ಮತ್ತು ಬರಿಸುವ ಅಂಶ ಶೇಖಡ ಎಷ್ಟು ಇತ್ತು ಎಂದು ಹೇಳಲಿಕ್ಕಾಗುವುದಿಲ್ಲ.

**ಮರು ವಿಚಾರಣೆ** ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.